ಮೈಸೂರಿನ ಕುವೆಂಪು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು.

೧೪೪೬(೧೭೫೯)

ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ಮೈಸೂರಿನ ಕುವೆಂಪು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಜಾಗ ಮಂಜೂರು ಮಾಡಬೇಕೆಂದು ಕಳುಹಿಸಿದ್ದ ಪ್ರಸ್ತಾವನೆ ಯಾವ ಹಂತದಲ್ಲಿದೆ;

೨. ಈ ಕಾಲೇಜಿಗೆ ಸ್ವಂತ ಜಾಗ ಮಂಜೂರು ಮಾಡಿಸಿಕೊಂಡು ಸ್ವಂತ ಕಟ್ಟಡ ಹೊಂದಲು ಬೇಕಾಗುವ ಅಂದಾಜು ಮೊತ್ತವೆಷ್ಟು;

೩. ಈ ಕಾಲೇಜಿಗೆ ಸ್ವಂತ ನಿವೇಶನ:ಕಟ್ಟಡ ಕೂಡಲೇ ಮಂಜೂರು ಮಾಡಲಾಗುವುದೇ?

ಡಾ: ಜಿ.ಪರಮೇಶ್ವರ್: (ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು):

೧. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವಾಣಿಜ್ಯ ಸಂಕೀರ್ಣದ ಕಟ್ಟಡದ ಹಿಂಭಾಗದಲ್ಲಿರುವ ಖಾಲಿ ನಿವೇಶನವನ್ನು ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ವರ್ಗಾಯಿಸಿ ಕೊಡಬೇಕೆಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರನ್ನು ಕೋರಲಾಗಿದೆ.

೨. ಸುಮಾರು ರೂ. ೪೦.೦೦ ಲಕ್ಷಗಳು ಬೇಕಾಗಿರುತ್ತದೆ.

೩. ಸರ್ಕಾರವು ಈ ವಿಷಯವನ್ನು ತ್ವರಿತವಾಗಿ ಅನುಸರಿಸುವುದು.

ಮೈಸೂರಿನ ಕೃಷ್ಣ ರಾಜೇಂದ್ರ ಮತ್ತು ಚೆಲುವಾಂಬ ಆಸ್ಪತ್ರೆಗಳ ಸಮಸ್ಯೆ.

೧೪೪೭(೧೭೪೦)

ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿರುವ ಕೃಷ್ಣರಾಜೇಂದ್ರ ಮತ್ತು ಚೆಲುವಾಂಬ ಆಸ್ಪತ್ರೆಗಳು

ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಈ ಆಸ್ಪತ್ರೆಗಳ ಅಭಿವೃದ್ಧಿ ಬಗ್ಗೆ ಸರ್ಕಾರದ ಯೋಜನೆಗಳೇನು? ವಿವರ ಒದಗಿಸುವುದು:

ಡಾ: ಎ.ಬಿ.ಮಾಲಕರೆಡ್ಡಿ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು.

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಅವಶ್ಯಕತೆ ಇರುವಷ್ಟು ಉಪಕರಣಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮಕ್ಕಳ ಆಸ್ಪತ್ರೆಯಲ್ಲಿ ರ್‍ಯಾಂಪ್ (ಇಳಿಜಾರು ಮಾರ್ಗ) ಅನ್ನು ನಿರ್ಮಿಸಲಾಗಿದೆ.

ಇ) ೧) ಶಸ್ತ್ರ ಚಿಕಿತ್ಸಾ ಕೊಠಡಿಯನ್ನು ಹವಾನಿಯಂತ್ರಣಗೊಳಿಸುವುದು, ಡಯಾಲಿಸಿಸ್ ಯೂನಿಟ್, ಸುಟ್ಟಗಾಯಗಳ ವಾರ್ಡ್, ತೀವ್ರ ನಿಗಾ ಘಟಕ (ಐ.ಸಿ.ಯು) ಇವುಗಳನ್ನು ಸಹ ಹವಾನಿಯಂತ್ರಣಗೊಳಿಸುವುದು.

೨) ಡಯಾಲಿಸಿಸ್ ಯೂನಿಟ್ಟಿಗೆ ಹೆಚ್ಚುವರಿ ಡಯಾಲಿಸಿಸ್ ಉಪಕರಣಗಳನ್ನು ಮತ್ತು ಐ.ಸಿ.ಯು ಗೆ ವೆಂಟಿಲೇಟರ್‌ಗಳನ್ನು ಹೆಚ್ಚುವರಿಯಾಗಿ ಸರಬರಾಜು ಮಾಡುವುದು.

೩) ಕೋಬಾಲ್ಟ್ ಥೆರಪಿ ಯೂನಿಟ್ ಅನ್ನು ಸ್ಥಾಪಿಸುವುದು. ಚೆಲುವಾಂಬ ಮತ್ತು ಕೆ.ಆರ್.ಆಸ್ಪತ್ರೆಯ ನವೀಕರಣ.

ಕಡ್ಡಾಯ ಶಿಕ್ಷಣ ನೀತಿ ಅನುಷ್ಠಾನಗೊಳಿಸುವುದು.

೧೪೪೮(೧೬೭೭)

ಶ್ರೀ ವಿ.ಸೋಮಣ್ಣ(ಬಿನ್ನಿಪೇಟೆ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡ್ಡಾಯ ಶಿಕ್ಷಣ ಕಾಯಿದೆ ಅಡಿಯಲ್ಲಿ ಕೊಳಚೆ ಪ್ರದೇಶಗಳಿಗೆ